# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಸಂಖ್ಯೆ: ಕೆ.ಪಿ.ಟಿ–01/ 58112/2016-17
ಲಗತ್ತು:

ನಿಗಮ ಕಾರ್ಯಾಲಯ,
ಕ.ವಿ.ಪ್ರ.ನಿ.ನಿ., ಕಾವೇರಿ ಭವನ,
ಬೆಂಗಳೂರು–560009.
ದಿನಾಂಕ: 31 AUG 2016

## ಸುತ್ತೋಲೆ

ವಿಷಯ: ಪಿಂಚಣಿ ಪಾವತಿ ಆದೇಶಗಳಲ್ಲಿ ಪಿಂಚಣಿ/ಕುಟುಂಬ ಪಿಂಚಣಿ ಪಾವತಿಸಿರುವ ವಿವರಗಳನ್ನು ದಾಖಲಿಸುವ ಬಗ್ಗೆ

********

ನಿಗಮದಲ್ಲಿ ನಿವೃತ್ತಿ ವೇತನ ಪಡೆಯುತ್ತಿದ್ದು, ಸದರಿ ನಿವೃತ್ತಿದಾರರು ನಿಧನ ಹೊಂದಿದ ಪ್ರಕರಣಗಳಲ್ಲಿ ಸದರಿಯವರ ವಾರಸುದಾರರಿಗೆ ಕುಟುಂಬ ಪಿಂಚಣಿ ಅಧಿಕರಿಸಲು ದಸ್ತಾವೇಜುಗಳೊಂದಿಗೆ ನೀಡಲಾಗುವ ನಿವೃತ್ತರ ಪಿಂಚಣಿ ಪಾವತಿ ಆದೇಶಗಳನ್ನು ಪರಿಶೀಲಿಸಲಾಗಿ ಕಾಲ ಕಾಲಕ್ಕೆ **ನಿಗಮದ ಆದೇಶದ ಮೇರೆಗೆ ಪರಿಷ್ಕೃತಗೊಂಡಿರುವ ಪಿಂಚಣಿ ವಿವರಗಳನ್ನು ಹಾಗೂ ಮಾಹೆಯಾನ ನಿವೃತ್ತಿ ವೇತನವನ್ನು ಪಾವತಿಸಲಾಗಿರುವ ವಿವರಗಳನ್ನು ಪಿಂಚಣಿ ಪಾವತಿ ಆದೇಶಗಳ ಎರಡು ಭಾಗಗಳಲ್ಲಿ ದಾಖಲಿಸದಿರುವುದು ಕಂಡುಬಂದಿರುತ್ತದೆ.**

ಕ.ವಿ.ಮಂ., ಲೆಕ್ಕಗಳ ಕೈಪಿಡಿ ಭಾಗ–2 'ಬಿ' ದ ಪ್ಯಾರಾ 602 (29) ರನ್ವಯ ನಿವೃತ್ತಿದಾರರಿಗೆ ಪಾವತಿಸಲಾದ ನಿವೃತ್ತಿ ವೇತನದ ವಿವರಗಳನ್ನು ಪಿಂಚಣಿ ಪಾವತಿ ಆದೇಶದ ಎರಡು ಭಾಗಗಳಲ್ಲಿ ದಾಖಲಿಸಿ, ಪಿಂಚಣಿ ಬಟವಾಡೆ ಅಧಿಕಾರಿಯ ರುಜುವಿನೊಂದಿಗೆ ಅನುಪ್ರಮಾಣಿಕರಿಸಬೇಕಾಗಿರುತ್ತದೆ. ಆದ್ದರಿಂದ, ನಿವೃತ್ತಿದಾರರ ಪಿಂಚಣಿ ಪಾವತಿ ಆದೇಶದ ಎರಡೂ ಭಾಗಗಳಲ್ಲಿ ನಿಗಮದ ಆದೇಶಗಳನ್ವಯ ಪರಿಷ್ಕರಿಸಲಾದ ಪಿಂಚಣಿ/ಕುಟುಂಬ ಪಿಂಚಣಿ ವಿವರಗಳು ಹಾಗೂ ಮಾಹೆವಾರು ಪಾವತಿಸಲಾದ ಪಿಂಚಣಿ/ಕುಟುಂಬ ಪಿಂಚಣಿಗಳ ವಿವರಗಳನ್ನು ಕಡ್ಡಾಯವಾಗಿ ದಾಖಲಿಸಿ ದೃಢೀಕರಿಸುವ ಬಗ್ಗೆ ಕ್ರಮ ಕೈಗೊಳ್ಳಲು ತಿಳಿಸಲಾಗಿದೆ.

ಪಿಂಚಣಿದಾರರ ಬಟವಾಡೆ ಭಾಗ ಹಾಗೂ ಪಿಂಚಣಿದಾರರ ಭಾಗಗಳಲ್ಲಿ ಪಿಂಚಣಿ ಪಾವತಿ ವಿವರಗಳನ್ನು ದಾಖಲಿಸದೇ ಕುಟುಂಬ ಪಿಂಚಣಿ ಪ್ರಸ್ತಾವನೆ ಕಳುಹಿಸಿದಲ್ಲಿ ಸದರಿ ಪ್ರಕ್ರಿಯೆಯಿಂದ ಉಂಟಾಗುವ ವಿಳಂಬಕ್ಕೆ ಸಂಬಂಧಿಸಿದ ಅಧಿಕಾರಿಗಳು ಜವಾಬ್ದಾರರಾಗುವರೆಂದು ಈ ಮೂಲಕ ತಿಳಿಸಲಾಗಿದೆ.

ಆರ್ಥಿಕ ಸಲಹೆಗಾರರು
(ಲೆ ಮತ್ತು ಸಂ)

ಪ್ರತಿಗಳು:

1. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವಿಭಾಗ,ಬೆ.ವಿ.ಕಂ/ಹು.ವಿ.ಸ.ಕಂ/ ಗು.ವಿ.ಸ.ಕಂ/ ಮಂ.ವಿಸ.ಕಂ/ಚಾ.ವಿ.ಸ.ಕಂ.,
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕ.ವಿ.ಪ್ರ.ನಿ.ನಿ., ಎಂ.ಆರ್.ಎಸ್.ಶಿವಮೊಗ್ಗ.
3. ಅಧೀಕ್ಷಕ ಇಂಜಿನಿಯರ್(ವಿ), (ಐ.ಟಿ ಮತ್ತು ಎಂ.ಐ.ಎಸ್), ಕ.ವಿ.ಪ್ರ.ನಿ.ನಿ., ಕಾವೇರಿ ಭವನ, www.kptcl.com/e-prasarana/administrative/pension ನಲ್ಲಿ ಮಾಹಿತಿಗಾಗಿ.
4. ಎಲ್ಲಾ ಲೆಕ್ಕಾಧಿಕಾರಿಗಳು, ಕ.ವಿ.ಪ್ರ.ನಿ.ನಿ/ಬೆ.ವಿ.ಕಂ/ಹು.ವಿ.ಸ.ಕಂ/ ಗು.ವಿ.ಸ.ಕಂ/ ಮಂ.ವಿಸ.ಕಂ/ಚಾ.ವಿ.ಸ.ಕಂ.,
5. ಪ್ರಧಾನ ಕಡತ

| | |
|---|---|
| EE (IT) | ✓ |
| EE (MIS) | |
| DCA (IT) | |
| SEE (IT&MIS) | 3/9/16 |

AEE-4 | AE-1
9/9/2016